

ಸಂಡಿಗೆಗಳು, ಮೆಣಸಿನಕಾಯಿ ಇಟ್ಟುಕೊಂಡು ಕುಳಿತರೆ ಸ್ವರ್ಗವೇ ಧರೆಗಿಳಿದಂತೆ. ಗಾಣ ಹಾಕಿದಾಗ ನೊರೆನೊರೆಯಾಗಿ ತೇಲಿ ಬರುವ ಬೆಲ್ಲದ ಪಾಕದಲ್ಲಿ ಅಣ್ಣಂದಿರು ಪಪ್ಪಾಯಿಯ ಬಿಲ್ಲೆಗಳನ್ನು ಎಸೆದು, ಕಡ್ಡಿಯಿಂದ ತೆಗೆದು ಕೊಡುತ್ತಿದ್ದರು. ಚಾಕೊಲೇಟ್‌ಗಿಂತ ಸಿಹಿಯಾಗಿ ರುಚಿಯಾಗಿರುತ್ತಿದ್ದವು. ನಾವು ಚೀಪಿದ್ದೇ ಬಂತು. ಹೇಳಿ ಕೇಳಿ ನಮ್ಮದು ಕೃಷ್ಣಾ ತೀರ. ಅಲ್ಲಿನ ತರಕಾರಿಗಳು, ಹಣ್ಣು, ಕಾಳುಗಳು… ಎಲ್ಲ ರುಚಿಯೇ.

ಅವ್ವ ಒಳಗೊಳಗೇ ನನ್ನ ಬಗ್ಗೆ ಕಳವಳಗೊಳ್ಳುತ್ತಿದ್ದರೂ ಅಪ್ಪನಿಗೆ ಹೆಚ್ಚು ಆತಂಕವಿರಲಿಲ್ಲ. “ರುಕ್ಕೀದು ಅತ್ತಿ ಇಲ್ಲದ ಮನಿ ಮತ್ತ ಮಾರಿ ಮ್ಯಾಲಿನ ಕಲೆ ಬ್ಯಾರೆ. ಹೆಂಗಾಗ್ತದೋ…” ಎಂದು ದುಗುಡದಿಂದ ಅವ್ವ ಹೇಳಿದರೆ ಅಪ್ಪ ತನ್ನ ರಾಜೇಶಾಹಿ ಥಾಟಿನಲ್ಲಿ ಲೋಡಿಗೆ ಒರಗಿ ಕುಳಿತುಕೊಂಡು, “ಎಲ್ಲಾ ಹೂ ಎತ್ತಿಧಂಗ ಆಗ್ತದ. ಯಾಕ ಕಾಳಜಿ ಮಾಡತಿ? ಎಲ್ಲಾರೂ ಬರೇ ಮಾರಿ ನೋಡ್ತಾರೇನು? ಮನಿ…ಮನಿತನ ನೋಡಿ ಬರ್ತಾರ. ಈ ಶ್ಯಾಮರಾವ್ ದೇಶಪಾಂಡೆಯವರ ಮನಿತನದ ಕನ್ಯಾ ಅಂದರ ಕಾಲು ಬಿದ್ದು ಮಾಡಕೋತಾರ” ಎಂದು ಹೊಗಳಿಕೊಂಡದ್ದಿತ್ತು. ಕಾಲು ಬೀಳುವುದಿರಲಿ, ಯಾರೂ ಕೇಳಲೂ ಬರಲಿಲ್ಲ. ಮನೆಯ ಬಿಡುವಿಲ್ಲದ ಕೆಲಸಗಳ ಮಧ್ಯೆ ನಾನು ಹಟ ಹಿಡಿದು ಹತ್ತನೇ ತರಗತಿ ಪಾಸು ಮಾಡಿಕೊಂಡೆ. “ಯಾಕ ಪರೀಕ್ಷಾ ಅಂತ ಓದಿ ಒದ್ಯಾಡೋದು? ಕೆಲಸ, ಬೊಗಸಿ ಕಲತರ ಸಾಕು” ಎಂದಿದ್ದ ಅಪ್ಪ ಪಾಸಾದ ಅನಂತರ ತಾನೇ, “ಹತ್ತನೇತ್ತಾ ಪಾಸಾಗ್ಯಾಳ” ಎಂದು ಹೇಳಿಕೊಳ್ಳಲಾರಂಭಿಸಿದ. ಜೊತೆಗೆ ಓಡಾಡಲು ಅನೇಕ ಗೆಳತಿಯರಿದ್ದರೂ ಮಂಚಿಯೊಂದಿಗಿನ ಆತ್ಮೀಯತೆ ಯಾರೊಂದಿಗೂ ಹುಟ್ಟಲಿಲ್ಲ.

ಹರೆಯ ಹರಿದು ಬಂದಾಗ ನನ್ನಲ್ಲೂ ಕನಸುಗಳರಳಿದವು. ಕುದುರೆ ಏರಿ ಬರುವ ಕನಸಿನ ರಾಜಕುಮಾರನಿಗಾಗಿ ಕಣ್ಣುಗಳರಳಿಸಿ ಕಾಯುತ್ತಿದ್ದೆ. ಆ ರಾಜಕುಮಾರ ನೆಪ ಹೂಡಿ ಕಾಯಿಸುತ್ತಿದ್ದ. ಆಗ ಅಲ್ಲಿ ಬೇರಾರದೋ ಬಿಂಬ ಮೂಡುತ್ತಿತ್ತು. ಶಂಕರ… ಹ್ಞಾಂ… ಶಂಕರ. ಸಂಜೆ ನೀರಿಗೆ ಹೋದಾಗ ಸಿಗುತ್ತಿದ್ದ. ತೆಳ್ಳಗಾದರೂ ಗಟ್ಟಿಮುಟ್ಟಾದ ಕಾಯ, ಚಿಗುರು ಮೀಸೆ, ತೀಕ್ಷ್ಣವಾದ ಕಣ್ಣುಗಳು. ಆ ಕಣ್ಣುಗಳಲ್ಲಿ ನನ್ನ ಬಗ್ಗೆ ಪ್ರೇಮವಷ್ಟೇ ಅಲ್ಲ… ಆರಾಧನಾಭಾವ. ಆ ದೃಷ್ಟಿಯನ್ನು ಎದುರಿಸಲಾರದೇ ನಾನು ತಲೆತಗ್ಗಿಸುತ್ತಿದ್ದೆ. ಆದರೆ, ಎದೆಯಲ್ಲಿ ಪುಳಕ. ಮೈಯೆಲ್ಲ ರೋಮಾಂಚನದಲ್ಲಿ ಮೀಯುತ್ತಿತ್ತು.